# ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ವಸಂತ ಮಹಲ್, ಮೈಸೂರು.

## ನಾಲ್ಕನೇ ತರಗತಿ ಸೇತುಬಂಧ ಸಾಹಿತ್ಯ–30 ದಿನಗಳು.

| ಕ್ರ.ಸಂ | ಪರಿಕಲ್ಪನಾ ಕ್ಷೇತ್ರ ಮೈಲುಗಲ್ಲು | ದಿನ | ಸಾಮರ್ಥ್ಯ/ಕಲಿಕಾಂಶ | ಕಲಿಕಾಂಶ ಚಟುವಟಿಕೆ | ಪುನರ್ಬಲನ ಚಟುವಟಿಕೆ | ಮೌಲ್ಯಮಾಪನ ಚಟುವಟಿಕೆ |
|---|---|---|---|---|---|---|
| 1 | ಬಾವಿಯಲ್ಲಿ ಚಂದ್ರ | 1 | ಕಥನ, ವಿವರಣೆ, ಒಗಟುಗಳನ್ನು ಆಲಿಸುವುದು ಮತ್ತು ಅರ್ಥಮಾಡಿಕೊಳ್ಳುವುದು | ಕಥನ ಗೀತೆ ಕೇಳುವುದು | ಆಲಿಸಿದ ಕಥನ ಗೀತೆ ಧ್ವನಿಸುರುಳಿಯನ್ನು ಮಕ್ಕಳಿಂದ ಹಾಡಿಸುವುದು. | ಮಕ್ಕಳು ತಮಗೆ ಗೊತ್ತಿರುವ ಕಥೆಗಳನ್ನು ನಿರರ್ಗಳವಾಗಿ ಹೇಳುವಂತೆ ಪ್ರೇರೆಪಿಸುವುದ. |
| | | 2 | ಕಥನವನ್ನು ಆಲಿಸಿ ಅರ್ಥಮಾಡಿಕೊಳ್ಳುವುದು | "ಬಾವಿಯಲ್ಲಿ ಚಂದ್ರ' ಪದ್ಯದ ವೀಡಿಯೋ ತುಣುಕನ್ನು ತೋರಿಸುವುದು. | ಪ್ರಸಾರವಾಗುತ್ತಿರುವ ವೀಡಿಯೋ / ಆಡಿಯೋ ತುಣುಕಿನ ಜೊತೆ-ಜೊತೆಗೆ ಮಕ್ಕಳನ್ನು ಹಾಡಲು ತಿಳಿಸುವುದು. | ಪದ್ಯವನ್ನು ಕಂಠಪಾಠ ಮಾಡಿಸುವುದು. |
| | | 3 | ವಿವರಣೆಯನ್ನು ಅರ್ಥೈಸಿಕೊಳ್ಳುವರು | ಶಿಕ್ಷಕರು ಪದ್ಯವನ್ನು ನಿರರ್ಗಳವಾಗಿ ಮತ್ತು ಸ್ಪಷ್ಟವಾಗಿ, ಸೂಕ್ತ ಸ್ವರಭಾರದೊಂದಿಗೆ ಹಾಡುವ ಕ್ರಮ ಪರಿಚಯಿಸುವುದು. | ಪದ್ಯವನ್ನು ಸೂಕ್ತ ಕ್ರಮದಲ್ಲಿ ಓದುವ ಅಭ್ಯಾಸ ಮಾಡುವುದರೊಂದಿಗೆ, ಅಭ್ಯಾಸದ ಪ್ರಶ್ನೆಗಳಿಗೆ ಉತ್ತರ ಹೇಳುವಂತೆ ಪ್ರೊತ್ಸಾಹಿಸುವುದು. | ಪಠ್ಯಪುಸ್ತಕದ ಭಾಷಾಭ್ಯಾಸದಲ್ಲಿನ ಪ್ರಶ್ನೆಗಳಿಗೆ ಉತ್ತರ ಬರೆಸುವುದು. |

| | | | | | | |
|---|---|---|---|---|---|---|
| | | 4 | ಒಗಟುಗಳನ್ನು ಅರ್ಥಮಾಡಿಕೊಂಡು ಉತ್ತರಿಸುವರು. | ಕಲಿಕಾಂಶಕ್ಕೆ ಪೂರಕವಾದ ಒಗಟುಗಳನ್ನು ಹೇಳಿ ಉತ್ತಿರಿಸಲು ಪ್ರೋತ್ಸಾಹಿಸುವುದು. | ಮಕ್ಕಳು ತಮಗೆ ಗೊತ್ತಿರುವ ಒಗಟುಗಳನ್ನು ಹೇಳಲು ಪ್ರೋತ್ಸಾಹಿಸುವುದು. | ಸ್ಥಳೀಯ ಒಗಟುಗಳ ಸಂಗ್ರಹ ಮಾಡಲು ತಿಳಿಸುವುದು. |
| 2 | ಉದ್ಯಾನವನದಲ್ಲಿ ಒಂದು ದಿನ | 5 | ಸೂಚನಾ ಫಲಕಗಳ ಸರಳ ಸೂಚನೆಗಳನ್ನು ಓದುವುದು. | ಸೂಚನಾ ಫಲಕ ಓದಿ ಅದನ್ನು ಅರ್ಥೈಸಿಕೊಂಡು ಅಭಿನಯಿಸುವುದನ್ನು ಅಭ್ಯಾಸ ಮಾಡಿಸುವುದು.<br>ಉದಾ: ಸಾಲಾಗಿ ನಿಲ್ಲಿ, ಮಾಸ್ಕ ಧರಿಸಿ, ಅಂತರವಿರಲಿ | ವಿಭಿನ್ನ ಸನ್ನಿವೇಶದಲ್ಲಿ ನಾವು ಅನುಸರಿಸಬೇಕಾದ ಸರಳ ಸೂಚನೆ ಗಳನ್ನು ಮಕ್ಕಳಿಂದ ಪಟ್ಟಿ ಮಾಡಿಸುವುದು.<br>ಉದಾ: ಮೃಗಾಲಯಕ್ಕೆ ಭೇಟಿ ನೀಡಿದ ಸಂದರ್ಭ.<br>ದೇವಾಲಯಕ್ಕೆ ಹೋದಾಗ | * ವಿಭಿನ್ನ ಸನ್ನಿವೇಶದಲ್ಲಿ ಅನುಸರಿಸಬೇಕಾದ ಸರಳ ಸೂಚನೆಗಳನ್ನು ಮಕ್ಕಳಿಂದ ಹೇಳಿಸಿ ಮೌಲ್ಯಮಾಪನ ಮಾಡುವುದು.<br>* ಮಕ್ಕಳಿಂದ ಕೆಲವು ಸೂಚನಾಫಲಕ ತಯಾರಿಸುವುದು. |
| | | 6 | ಭಿತ್ತಿ ಪತ್ರಗಳನ್ನು ಅರ್ಥಮಾಡಿಕೊಳ್ಳುವರು | * ಪಲ್ಸ್ ಪೋಲಿಯೋ, ನೇತ್ರದಾನ ಕಾರ್ಯಕ್ರಮ,<br>* ಕೋವಿಡ್-19 ಪರೀಕ್ಷೆ, ಲಸಿಕೆ ಕಾರ್ಯಕ್ರಮದ ಭಿತ್ತಿ ಪತ್ರಗಳನ್ನು ಓದಿಸುವುದು ಮತ್ತು ಬರೆಸುವುದು. | ಪ್ರದರ್ಶಿತ ಭಿತ್ತಿ ಪತ್ರಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳಿಗೆ ಉತ್ತರ ಹೇಳುವಂತೆ ಪ್ರೇರೆಪಿಸುವುದು. | ಅಕ್ಷರಗಳನ್ನು ಕ್ರಮಬದ್ಧವಾಗಿ ಜೋಡಿಸುವ ಚಟುವಟಿಕೆ,<br>ಪಪೋಲ್ಸ್ ಯೊಲಿ = ಪಲ್ಸ್ ಪೋಲಿಯೊ |
| | | 7 | * ಪಠ್ಯವನ್ನು ನಿರರ್ಗಳವಾಗಿ ಓದುವುದು ಮತ್ತು ಓದಿಸುವುದು. | * ಸ್ಪಷ್ಟ ಉಚ್ಚಾರದೊಂದಿಗೆ ಸೂಕ್ತ ಸ್ವರಭಾರದೊಂದಿಗೆ ಓದುವಂತೆ ಅಭ್ಯಾಸ ಮಾಡಿಸುವುದು. | ಗದ್ಯದಲ್ಲಿ ಬಂದಿರುವ ಸೂಚನಾಫಲಕ ಹಾಗೂ ಭಿತ್ತಿ ಪತ್ರದಲ್ಲಿನ ವಾಕ್ಯಗಳನ್ನು ನಕಲು ಮಾಡಲು ತಿಳಿಸುವುದು. | ಪಠ್ಯಪುಸ್ತದ ಭಾಷಾಭ್ಯಾಸದ ಪ್ರಶ್ನೆಗಳಿಗೆ ಉತ್ತರ ಬರೆಯುವಂತೆ ಪ್ರೇರಣೆ ನೀಡುವುದರೊಂದಿಗೆ ಕಲಿಕೆಯ |

| | | | | | | |
|---|---|---|---|---|---|---|
| | | | | | | ದೃಢೀಕರಣ ಮಾಡುವುದು. |
| 3 | ಮುದ್ದು ಕಂದ | 8 | ಅಕ್ಷರಗಳನ್ನು ಮತ್ತು ಪದಗಳನ್ನು ಸರಿಯಾದ ಕ್ರಮದಲ್ಲಿ ಬರೆಯುವುದು | * ಅಕ್ಷರಗಳನ್ನು ಮತ್ತು ಪದಗಳನ್ನು ಸಮಗಾತ್ರದಲ್ಲಿ ಮತ್ತು ಸೂಕ್ತ ವಿನ್ಯಾಸದಲ್ಲಿ ಬರೆಯಲು ಅಭ್ಯಾಸ ಮಾಡಿಸುವುದು. | * ಅಕ್ಷರ ಮತ್ತು ಪದಗಳನ್ನು ಎರಡುಗೆರೆ ಪುಸ್ತಕದಲ್ಲಿ ನಕಲು ಮಾಡಲು ಪ್ರೇರೇಪಿಸುವುದು. | * ಪರಿಚಿತ ಚಿತ್ರಕೊಟ್ಟು ಅದಕ್ಕೆ ಸಂಬಂಧಿಸಿದಂತೆ ವಾಕ್ಯಗಳನ್ನು ಸೂಕ್ತ ಅಂತರದೊಂದಿಗೆ ಸ್ಪುಟವಾಗಿ ಬರೆಯಲು ತಿಳಿಸುವುದ. |
| | | 9 | ಉಕ್ತಲೇಖನದ ಮೂಲಕ ಅಪರಿಚಿತ ಪದಗಳನ್ನು ಬರೆಯುವುದು. | * 4ನೇ ಮ್ಯೆ, 48ನೇ ಮ್ಯೆಲು ಕಾರ್ಡ್ ಬಳಕೆ, ಸೂಕ್ತ ಅಂತರ,ಸರಿಯಾದ ವಿನ್ಯಾಸ ಅನುಕ್ರಮದ ಅಭ್ಯಾಸದೊಂದಿಗೆ ಅಪರಿಚಿತ ಪದಗಳನ್ನು ತಪ್ಪಿಲ್ಲದಂತೆ ಬರೆಯುವ ಕೌಶಲ್ಯ ರೂಢಿಸುವುದು. | * ಸರಳ ಪ್ರಾಸ ಪದ್ಯಗಳನ್ನು ನೀಡಿ ಹೊಸ ಪದಗಳನ್ನು ಗುರ್ತಿಸುವ ಹಾಗೂ ಪ್ರಾಸಪದಗಳನ್ನು ಗುರ್ತಿಸುವ ಚಟುವಟಿಕೆ ಮಾಡಿಸುವುದು. | * ಸರಳ ಪ್ರಾಸ ಪದ್ಯಗಳನ್ನು ಪೂರ್ಣಗೊಳಿಸುವ & ಪ್ರಾಸ ಪದ ಗುರ್ತಿಸುವ ಚಟುವಟಿಕೆ ಮಾಡಿಸುವುದು. |
| | | 10 | ಪದ್ಯವನ್ನು ಸ್ಪುಟವಾಗಿ ಬರೆಯುವುದು ಮತ್ತು ಗಾದೆ ಮಾತುಗಳ ಸಂಗ್ರಹ | ಪದ್ಯವನ್ನು ಸೂಕ್ತ ಸ್ವರಭಾರದೊಂದಿಗೆ ಓದುವುದರೊಂದಿಗೆ ಎರಡುಗೆರೆ ಪುಸ್ತಕದಲ್ಲಿ ಪದ್ಯವನ್ನು ಸ್ಪುಟವಾಗಿ ಬರೆಯಲು ಉತ್ತೇಜಿಸುವುದು. | ಪಠ್ಯಕ್ಕೆ ಪೂರಕ ಪ್ರಶ್ನೆ ನೀಡಿ ಉತ್ತರವನ್ನು ಮೌಖಿಕ / ಲಿಖಿತವಾಗಿ ಪಡೆಯುವುದು | * ಸ್ಥಳೀಯ ಗಾದೆ ಮಾತುಗಳನ್ನು ಸಂಗ್ರಹಿಸಿ ಬರೆಯಲು ತಿಳಿಸುವುದು.<br>* 3ನೇ ಮ್ಯೆಲಿಗಲ್ಲಿನ 62 ನೇ ಮೆಟ್ಟಿಲಿನ ನನ್ನ ಸಾಧನೆ ಕಾರ್ಡನ್ನು ಬಳಸಿ ಕಲಿಕೆಯ |

| | | | | | | |
|---|---|---|---|---|---|---|
| | | | | | | ದೃಢೀಕರಣ ಮಾಡುವುದು. |
| 4 | ಚಿನ್ನದ ಬೊಂಬೆಗಳು | 11 | ಅಪರಿಚಿತ ಸನ್ನಿವೇಶದಲ್ಲಿನ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥಮಾಡಿಕೊಳ್ಳುವರು | * ಸರಳ ಸಂಭಾಷಣೆಯ ಸಂವಾದ ಕಾರ್ಡ್ ಗಳನ್ನು ಶಿಕ್ಷಕರು ಓದುವುದು ಮತ್ತು ಮಕ್ಕಳಿಗೆ ಅಭ್ಯಾಸಮಾಡಿಸುವುದು. | ಸರಳ ಸಂಭಾಷಣೆ- ಸಂವಾದ ಕಾರ್ಡ್ ಗಳನ್ನು ಓದುವುದರೊಂದಿಗೆ ಸೂಕ್ತ ಅಭಿನಯದೊಂದಿಗೆ ಸಂಭಾಷಣೆ ನಡೆಸಲು ಪ್ರೋತ್ಸಾಹಿಸುವುದು. | * ಕೆಲವು ಚಿತ್ರ ಸಹಿತ ಕಥೆಗಳನ್ನು ಕೊಟ್ಟು ಓದಿಸುವುದು ಮತ್ತು ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರ ಬರೆಸುವುದು. |
| | | 12 | ಸ್ಪಷ್ಟ ಮತ್ತು ನಿರರ್ಗಳವಾಗಿ ಓದುವುದು | * ಪಠ್ಯದಲ್ಲಿದಲ್ಲಿರುವ ಸಂಭಾಷಣೆ ಸಂವಾದಗಳನ್ನು ಓದುವ ರೀತಿಯನ್ನು ಶಿಕ್ಷಕರನ್ನು ಅಭ್ಯಾಸಮಾಡಿಸುವುದು ಮತ್ತು ಮಕ್ಕಳಿಂದ ಓದಿಸುವುದು. | ಪಠ್ಯಕ್ಕೆ ಪೂರಕವಾದ ಪ್ರಶ್ನೆಗಳಿಗೆ ಉತ್ತರ ಬರೆಸಿ ಓದಿ- ಹೇಳುವಂತೆ ಉತ್ತೇಜಿಸುವುದು. | 3ನೇ ತರಗತಿಯ 5ನೇ ಮೈಲಿಗಲ್ಲಿನ ವಾಚಕಗಳ ಬಳಕೆಯಿಂದ ಕಲಿಕೆಯ ದೃಢೀಕರಣ ಮಾಡುವುದು. |
| | | 13 | | * ಓದುವ ಅಭ್ಯಾಸ ಮಾಡಿಸುವುದರೊಂದಿಗೆ ವಾಕ್ಯರಚನೆ ಮತ್ತು ನಾಣ್ಣುಡಿ ಸಂಗ್ರಹ ಮಾಡಿಸುವುದು | ಸರಳ ಪದಗಳನ್ನು ನೀಡಿ ವಾಕ್ಯದಲ್ಲಿ ಬಳಸಿ ಬರೆಯುವಂತೆ ಪ್ರೋತ್ಸಾಹಿಸುವುದು ಹಾಗೂ ತಪ್ಪಿಲ್ಲದಂತೆ ಬರೆಯಲು ತಿಳಿಸುವುದು ಹಾಗೂ ವಾಕ್ಯರಚನೆಗೆ ಸಹಕರಿಸುವುದು. | * ನಾಣ್ಣುಡಿಗಳ ಸಂಗ್ರಹ ಮಾಡಲು ತಿಳಿಸುವುದು.<br>* 3ನೇ ಮೈಲಿಗಲ್ಲಿನ 76ನೇ ಮೆಟ್ಟಿಲಿನ ಮೌಲ್ಯಮಾಪನ ಕಾರ್ಡ್ ಬಳಸಿ ಕಲಿಕೆಯನ್ನು ದೃಢೀಕರಣ |

| | | | | | | |
|---|---|---|---|---|---|---|
| | | | | | | ಮಾಡುವುದು. |
| 5 | ಶಾಲಾಪಾಕ್ಷಿಕ | 14 | ಸಹಪಾಠಿಗಳ ಬರವಣಿಗೆಯನ್ನು ಓದುವುದು | * ಶಿಕ್ಷಕರು ಸ್ಪಷ್ಟವಾಗಿ ಮತ್ತು ನಿರರ್ಗಳವಾಗಿ ಓದುವ ಕ್ರಮ ಪರಿಚಯಿಸುವುದು. | * ತರಗತಿಯಲ್ಲಿ ಬೇರೆ ಮಕ್ಕಳ ಕೈ ಬರಹವನ್ನು ಇತರೆ ಮಕ್ಕಳು ಓದಿ ಅರ್ಥಮಾಡಿಕೊಳ್ಳುವಂತೆ ಮಾಡುವುದು. | ರಜಾ ಪತ್ರ ಬರೆಸಿ ತರಗತಿಯ ಇತರ ಮಕ್ಕಳಿಂದ ಓದಿಸುವುದು. |
| | | 15 | ಕೈ ಬರಹವನ್ನು ಸ್ಪಷ್ಟ ಹಾಗೂ ನಿರರ್ಗಳವಾಗಿ ಓದುವುದು. | * ಪಠ್ಯಪುಸ್ತಕದ ವಿವಿಧ ಬರವಣಿಗೆಗಳನ್ನು ನಿರರ್ಗಳವಾಗಿ ಓದಿಸುವುದು ಮತ್ತು ಓದಿಸುವುದು.<br>* ಸ್ಫುಟವಲ್ಲದ ಬರವಣಿಗೆಯನ್ನು ಓದಲು ತೊಂದರೆಯಾಗುವುದನ್ನು ಮನದಟ್ಟು ಮಾಡಿಸಿ ಸರಿಯಾಗಿ ಬರೆಯಲು ಪ್ರೋತ್ಸಾಹಿಸುವುದು. | * ಸ್ಫುಟವಾಗಿ ಸಮಗಾತ್ರದಲ್ಲಿ ನೇರವಾಗಿ ಅಂದವಾಗಿ ಬರೆಯುವುದು.<br>* ರಜಾ ಪತ್ರ ಬರೆಯುವ ಕ್ರಮ ಅಭ್ಯಾಸ ಮಾಡಿಸುವುದು. | * ಕೆಲವು ಪದ / ವಾಕ್ಯದಲ್ಲಿನ ಲಿಂಗವನ್ನು ಬದಲಾಯಿಸಿ ಬರೆಯಲು ತಿಳಿಸುವುದು. |
| | | 16 | ಮುಂದ್ರಿತ ಅಕ್ಷರದಂತೆ ದುಂಡಾಗಿ ಬರೆಯುವುದು | * ಕೈ ಬರಹ ಮತ್ತು ಮುದ್ರಿತ ಅಕ್ಷರದ ವ್ಯತ್ಯಾಸ, ಆಕಾರ, ಗಾತ್ರ, ವಿವಿಧ ವಿನ್ಯಾಸ ಶೈಲಿಗಳನ್ನು ಗುರುರ್ತಿಸುವಂತೆ ಮಾಡುವುದು. | * ಸೂಚಿತ ಸ್ಥಳದಲ್ಲಿ ತಿಳಿದಿರುವ ಗಾದೆ/ ಸೂಕ್ತಿ / ಸುಭಾಷಿತವನ್ನು ಮಕ್ಕಳ ಕೈಯಿಂದಲೇ ಬರೆಸಿ ಭಿತ್ತಿ ಪತ್ರ ತಯಾರಿಸಲು ಪ್ರೋತ್ಸಾಹ ನೀಡುವುದು | * 3ನೇ ಮೈ 92ನೇ ಮೆಟ್ಟಿಲಿನ ನನ್ನ ಸಾಧನೆ ಕಾರ್ಡ್ ಬಳಸಿ ಕಲಿಕೆಯ ದೃಢೀಕರಣ.<br>* ವಿವಿಧ ವಿನ್ಯಾಸದಲ್ಲಿ ವಾಕ್ಯ ಬರವಣಿಗೆಯ |

| | | | | | | |
|---|---|---|---|---|---|---|
| | | | | | | ಯೋಜಿತ ಕಾರ್ಯ ನೀಡುವುದು.<br>ಉದಾ:ಸುಸ್ವಾಗತ |
| 6 | ಹರಿದ ಕಿಸೆ | 17 | ಪರಿಚಿತ ವಸ್ತುಗಳ ಬಗ್ಗೆ ವಿವರಿಸುವುದು. | * ಪದ್ಯವನ್ನು ರಾಗವಾಗಿ, ಭಾವ ಪೂರ್ಣವಾಗಿ ಹಾಡಲು ಸಮರ್ಥರನ್ನಾಗಿ ಮಾಡುವುದು. | ಪದ್ಯಕ್ಕೆ ಪೂರಕವಾಗಿ ಪ್ರಶ್ನಿಸಿ ಉತ್ತರ ಪಡೆಯುವುದು. | * ಪರಿಚಿತ ಸನ್ನಿವೇಶದ ಚಿತ್ರನೀಡಿ ಸಂಬಂಧಿಸಿದಂತೆ ಅರ್ಥಪೂರ್ಣ ವಾಕ್ಯ ರಚಿಸಲು ತಿಳಿಸುವುದು. |
| | | 18 | | * ಮಕ್ಕಳಿಂದ ಪದ್ಯವನ್ನು ರಾಗವಾಗಿ ಭಾವ ಪೂರ್ಣವಾಗಿ ಹಾಡಿಸುವುದು | * ಪದ್ಯದ ಅಭ್ಯಾಸ ಪ್ರಶ್ನೆಗಳಿಗೆ ಉತ್ತರ ಬರೆಯುವಂತೆ ಪ್ರೋತ್ಸಾಹ ನೀಡುವುದು. | ಒಗಟುಗಳ ಸಂಗ್ರಹ ಮಾಡಿಸುವುದು ಮತ್ತು ಒಗಟುಗಳಿಗೆ ಉತ್ತರ ಹೇಳುವ ಕೌಶಲ ಬೆಳೆಯುವಂತೆ ಮಾಡುವುದು. |
| | | 19 | | * ತಪ್ಪಿಲ್ಲದಂತೆ, ಸ್ಪಷ್ಟ ಹಾಗೂ ನಿರರ್ಗಳ ಓದಿನ ಕೌಶಲ ಬಲಪಡಿಸುವುದು. | * ಪರಿಚಿತ ಚಿತ್ರಕೊಟ್ಟು, ಅದರ ಉಪಯೋಗ ಬರೆದು ಗಟ್ಟಿಯಾಗಿ ಸ್ಪಷ್ಟವಾಗಿ ಓದಲು ಹೇಳುವುದು.<br>* ಸಮಾನ ಅರ್ಥ ಬರುವ ಪದಗಳನ್ನು ಪಟ್ಟಿ ಮಾಡಿಸುವುದು. | 3ನೇ ಮೈ 104ನೇ ಮೆಟ್ಟಿಲಿನ ನನ್ನ ಸಾಧನೆ ಕಾರ್ಡ್ ನ್ನು ಕಲಿಕೆಯ ದೃಢೀಕರಣಕ್ಕೆ ಬಳಸುವುದು. |

| | | | | | | |
|---|---|---|---|---|---|---|
| 7 | ಕೋಲಾಟ | 20 | ಕೊಟ್ಟಿರುವ ಪದಗಳ ಆಧಾರದಿಂದ ಅರ್ಥಪೂರ್ಣ ವಾಕ್ಯ ರಚಿಸುವುದು. | * ಸರಳ ಪರಿಚಿತ ಪದಗಳಿಗೆ / ಚಿತ್ರಗಳಿಗೆ ಅರ್ಥಪೂರ್ಣ ವಾಕ್ಯರಚನೆಯ ಅಭ್ಯಾಸ ಮಾಡಿಸುವುದು ಹಾಗೂ ನಿರರ್ಗಳವಾಗಿ ಸ್ಪಷ್ಟವಾಗಿ ಓದುವ ಕ್ರಮ ಪರಿಚಯಿಸುವುದು. | * ಚಿತ್ರಗಳನ್ನು/ಪದಗಳನ್ನು ಕೊಟ್ಟು ಸಂಬಂಧಿಸಿದಂತೆ ಸೂಕ್ತ ವಾಕ್ಯರಚಿಸಿ ಗಟ್ಟಿಯಾಗಿ ಮತ್ತು ಸ್ಪಷ್ಟವಾಗಿ ಓದಲು ಅಭ್ಯಾಸ ಮಾಡಿಸುವುದು. | ಪರಿಚಿತ ಚಿತ್ರ ನೀಡಿ ಅವುಗಳಿಗೆ ವಾಕ್ಯ ಬರೆಸಿ ಕಲಿಕೆಯ ದೃಢೀಕರಣ ಮಾಡುವುದು. |
| | | 21 | * ಸೂಚನೆಗಳನ್ನು ಅನುಸರಿಸಿ ವಿವರಣಾತ್ಮಕ ವಾಕ್ಯಗಳನ್ನು ಬರೆಯುವುದು. | * ಶಿಕ್ಷಕರು ಸ್ಪಷ್ಟವಾಗಿ ಮತ್ತು ನಿರರ್ಗಳವಾಗಿ ಓದುವ ಕ್ರಮ ಪರಿಚಯಿಸುವುದು. | * ಮಕ್ಕಳಿಂದ ಓದಿಸುವುದು.<br>* ಪಠ್ಯಕ್ಕೆ ಪೂರಕ ಪ್ರಶ್ನೆ ಸಿದ್ಧಪಡಿಸಿ ನೀಡಿ ಉತ್ತರ ಬರೆಯುವಂತೆ ಪ್ರೋತ್ಸಾಹಿಸುವುದು ಅಥವಾ ಪ್ರಶ್ನೋತ್ತರ ಕಾರ್ಡ್ ಗಳ ಬಳಕೆ | ವಿರುದ್ಧಾರ್ಥಕ ಪದಗಳ ಪಟ್ಟಿ , ಅನ್ಯಲಿಂಗ ಪದಗಳ ಪಟ್ಟಿನೀಡಿ ಸರಿಯಾಗಿ ಜೋಡಿಸಿ ಬರೆಯಲು ತಿಳಿಸುವುದು. |
| | | 22 | * ವಿರುದ್ಧಾರ್ಥಕ ಪದಗಳನ್ನು ಗುರ್ತಿಸುವುದು. | * ಚಿತ್ರ ನೀಡಿ ವಾಕ್ಯ ರಚಿಸುವಂತೆ ಮಾರ್ಗದರ್ಶನ ಮಾಡುವುದು. | ಕೋಷ್ಟಕ ನೀಡಿ ವಿರುದ್ಧ ಪದಗಳನ್ನು ಗುರ್ತಿಸುವುದು ಮತ್ತು ಜೋಡಿಸುವಂತೆ ಮಾಡುವುದು. | * ಚಿತ್ರ ಕಥೆಯನ್ನು ತೋರಿಸಿ ಕಥೆಯನ್ನು ಬರೆಸುವ ಮೂಲಕ ಕಲಿಕೆಯನ್ನು ದೃಢೀಕರಿಸುವುದು. |
| 8 | ನ್ಯಾಯನಿರ್ಣಯ | 23 | ಸರಿಯಾದ ಉಚ್ಚಾರಣೆಯೊಂದಿಗೆ ಮಾತನಾಡುವುದು. | * ಪದಗಳನ್ನು / ವಾಕ್ಯಗಳನ್ನು ಗಟ್ಟಿಯಾಗಿ ಸ್ಪಷ್ಟವಾಗಿ ಉಚ್ಚರಿಸುವುದು. | * ನಾಲಿಗೆ ಸುರುಳಿ ವಾಕ್ಯಗಳನ್ನು ಪದೇ-ಪದೇ ಹೇಳಿಸಿ ಉಚ್ಚಾರಣೆಯನ್ನು ಗಮನಿಸುವುದು. | * ನಾಲಿಗೆ ಸುರಳಿ ಪದಗಳನ್ನು /ವಾಕ್ಯಗಳನ್ನು ಹೇಳಿಸುವುದು.<br>*ನಾಲಿಗೆ ಸುರುಳಿ ವಾಕ್ಯ ಸಂಗ್ರಹ ಮಾಡಲು ತಿಳಿಸುವುದು. |

| | | | | | | |
|---|---|---|---|---|---|---|
| | | 24 | * ಸರಿಯಾದ ಸ್ವರಭಾರ ಮತ್ತು ಅಭಿನಯದ ಮೂಲಕ ಗೊತ್ತಿರುವ ಸರಳ ಕಥೆಯನ್ನು ಹೇಳುವುದು. | * ಪಠ್ಯಾಂಶವನ್ನು ಗಟ್ಟಿ ಧ್ವನಿಯಲ್ಲಿ ಓದುವ ಅಭ್ಯಾಸ ಮಾಡಿಸುವುದು ಮತ್ತು ಧ್ವನಿ ವ್ಯತ್ಯಾಸದ ಬಗ್ಗೆ ತಿಳಿಸಿಕೊಡುವುದು. | * ಧ್ವನಿ ವ್ಯತ್ಯಾಸದ ಪದಗಳ ಚಾರ್ಟ್ ಗಳನ್ನು ನೀಡಿ ಓದಿಸುವುದು ಮತ್ತು ವ್ಯತ್ಯಾಸ ಹೇಳಿಸುವುದು.<br>ಉದಾ: ಅಕ್ಕಿ, ಹಕ್ಕಿ<br>ದನ, ಧನ | * ಪಠ್ಯಭಾಗವನ್ನು ಲೇಖನಚಿಹ್ನೆ ಸಹಿತ ಬರೆಯಲು ತಿಳಿಸುವುದು, ಲೇಖನ ಚಿಹ್ನೆ ಗುರ್ತಿಸುವುದು.<br>* ಸೂಕ್ತ ಅಭಿನಯದ ಮೂಲಕ ಸಂಭಾಷಣೆ ಮಾಡುವುದು. |
| | | 25 | ಲೇಖನ ಚಿಹ್ನೆಗಳ ಬಳಕೆ | ಲೇಖನ ಚಿಹ್ನೆಗಳನ್ನು ಸಂದರ್ಭೋಚಿತವಾಗಿ ಬಳಸುವ ಅಭ್ಯಾಸ ಮಾಡುವುದು. | ಸರಳ ವಾಕ್ಯಗಳನ್ನು ನೀಡಿ ಲೇಖನ ಚಿಹ್ನೆ ಹಾಕಲು ಅಭ್ಯಾಸ ಮಾಡಿಸುವುದು.<br>ನಿನ್ನ ಹೆಸರೇನು<br>ಅಬ್ಬಾ<br>ಎಷ್ಟು ದೊಡ್ಡ ಮನೆ | 3ನೇ ಮೈಲಿಗಲ್ಲಿನ 134ನೇ ಮಟ್ಟಿಲಿನ ನನ್ನ ಸಾಧನೆ ಕಾರ್ಡ್ ಬಳಸಿ ಕಲಿಕೆಯ ದೃಢೀಕರಣ ಮಾಡುವುದು |
| 9 | ಕಿತ್ತೂರು ಚೆನ್ನಮ್ಮ | 26 | * ಪಠ್ಯದಲ್ಲಿರುವ ಮುಖ್ಯ ವಿಷಯಗಳನ್ನು ಗುರ್ತಿಸುವುದು | ಪದ್ಯವನ್ನು ರಾಗವಾಗಿ ಮತ್ತು ಭಾವಪೂರ್ಣವಾಗಿ ಹಾಡಲು ಸಮರ್ಥರನ್ನಾಗಿ ಮಾಡುವುದು. | * ಪದ್ಯವನ್ನು ಗದ್ಯರೂಪದಲ್ಲಿ ಮೌಖಿಕವಾಗಿ ಹೇಳಿಸುವುದು. | * ಪದ್ಯದಲ್ಲಿ ನಿನಗೆ ಇಷ್ಟವಾದ ಪದ್ಯ ಭಾಗಕ್ಕೆ ಸಾರಾಂಶ ಬರೆ |
| | | 27 | * ಪಠ್ಯವನ್ನು ಆಲಿಸಿದ ನಂತರ ಏಕೆ? ಪ್ರಶ್ನೆಗೆ ಉತ್ತರಿಸುವರು | * ಪದ್ಯವನ್ನು ತಪ್ಪಿಲ್ಲದಂತೆ ನಿರರ್ಗಳವಾಗಿ ಹಾಡಿಸುವುದು, ಸಾರಾಂಶ ತಿಳಿಸಿ ಏಕೆ? ಹೇಗೆ? ಯಾರು? ಪ್ರಶ್ನೆಗಳಿಗೆ ಉತ್ತರ ಪಡೆಯುವುದು. | * ಯಾವುದಾದರೂ ಘಟನೆ/ಸನ್ನಿವೇಶ ಹೇಳಿ ಪೂರಕ ಪ್ರಶ್ನೆ ಕೇಳಿ ಉತ್ತರ ಪಡೆಯುವುದು. | ಗದ್ಯಾಂಶವನ್ನು ಕೊಟ್ಟು ಪೂರಕವಾಗಿ ಏಕೆ? ಯಾರು? ಯಾವಾಗ? ಎಲ್ಲಿ ಮುಂತಾದ ಪ್ರಶ್ನೆ ಕೇಳಿ ಗದ್ಯಾಂಶ ಓದಿ ಉತ್ತರ ಬರೆಸಿ |

| | | | | | | |
|---|---|---|---|---|---|---|
| | | | | | | ಕಲಿಕೆಯ ದೃಢೀಕರಣ ಮಾಡುವುದು. |
| | | 28 | * ಪದ್ಯವನ್ನು ಓದಿದ ಮೇಲೆ ಯಾರು? ಯಾವಾಗ? ಎಲ್ಲಿ? ಏನು? ಏಕೆ? ಪ್ರಶ್ನೆಗಳಿಗೆ ಉತ್ತರಿಸುವುದು. | * ಪದ್ಯಾಂಶವನ್ನು ಓದಿಸಿ, ಸರಳ ಪ್ರಶ್ನೆಗಳನ್ನು ಕೇಳುವ ಮೂಲಕ ಉತ್ತರಿಸುವಂತೆ ಪ್ರೇರೇಪಿಸುವುದು. | ಯಾವುದದರೂ ಘಟನೆ ನೀಡಿ/ಪೂರಕ ಪ್ರಶ್ನೆ ಕೇಳಿ ಉತ್ತರ ಪಡೆಯುವುದು | * ಚಿತ್ರಗಳ ಸಹಾಯದಿಂದ ಪದ್ಯ ರಚಿಸಲು ಪ್ರೇರೇಪಿಸುವುದು.<br>* ನವಿಲು, ಕಾಡು, ಹಣ್ಣು, ಬಾಲಕ ಇತ್ಯಾದಿ ಚಿತ್ರಗಳ ಸಹಾಯದಿಂದ ಪುಟ್ಟ ಕವಿತೆ ರಚಿಸಲು ತಿಳಿಸುವುದು. |
| 10 | ಮೌಲ್ಯಮಾಪನ | 29 | ಪ್ರಶ್ನೆಗಳಿಗೆ ಮೌಖಿಕ/ಲಿಖಿತವಾಗಿ ಉತ್ತರಿಸುವರು | ಹಿಂದಿನ ಎಲ್ಲಾ ಸಾಮರ್ಥ್ಯಕ್ಕನುಗುಣವಾಗಿ ಪ್ರಶ್ನೆ ಸಿದ್ಧಪಡಿಸಿ ಮಕ್ಕಳಿಂದ ಉತ್ತರ ಪಡೆಯುವುದು. | | |
| | | 30 | ಮಕ್ಕಳ ಉತ್ತರ ಪತ್ರಿಕೆಗಳನ್ನು ಅವರಿಗೆ ಕೊಟ್ಟು ಯಾವ ಪ್ರಶ್ನೆಗಳಿಗೆ ತಪ್ಪು ಉತ್ತರಿಸಿದ್ದಾರೆ / ಉತ್ತರ ನೀಡಿಲ್ಲ ಎಂಬುದನ್ನು ಗಮನಿಸಲು ತಿಳಿಸುವುದು ಮತ್ತು ಗೆಳೆಯರ ಸಹಾಯದಿಂದ ಸರಿಯುತ್ತರ ನೀಡುವಂತೆ ಉತ್ತೇಜಿಸುವುದು. | | | |